S C.R.P.67

| |
|---|
| Form No.4<br>(Criminal)<br>Deposition<br>Sheets<br>(R.P.No.57) |

# 5ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ

## ಸ್ಪೆಷಲ್ ಕೇಸ್ ನಂಬರ್‌ಃ 208/2019

ಚಾ.ಸಾ.–07 ಫ್ರಾ.ಸಾ.–06

| | |
|---|---|
| **ಸಾಕ್ಷಿದಾರರ ಹೆಸರು** | **ಗೋವಿಂದಚಾರಿ** |
| **ತಂದೆಯ ಹೆಸರು** | **ಲೇಟ್ ಮಾಯಾಚಾರಿ** |
| **ವಯಸ್ಸು** | **69 ವರ್ಷಗಳು** |
| **ಉದ್ಯೋಗ** | **ಏನು ಇಲ್ಲ** |
| **ವಾಸ** | **ಮಂಡ್ಯ.** |

**ದಿನಾಂಕಃ 24.02.2026 ರಂದು ಪ್ರಮಾಣವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ**

1) ನನಗೆ ಈಗ ತೋರಿಸಿದ ಮಹಜರಿನಲ್ಲಿ ಇರುವ ಸಹಿ ನನ್ನದು. ಸದರಿ ಮಹಜರನ್ನು ಈಗಾಗಲೇ ನಿಪಿ–6 ಎಂದು ಗುರುತಿಸಲಾಗಿದೆ, ಅದರಲ್ಲಿ ಸಾಕ್ಷಿಯು ಗುರುತಿಸಿರುವ ಅವರ ಸಹಿಯನ್ನು **ನಿಪಿ–6(ಬಿ)** ಎಂದು ಗುರುತಿಸಲಾಗಿದೆ. ನಿಪಿ–8 ಫೋಟೋವಿನಲ್ಲಿ ನಾನು ಕಂಡುಬರುತ್ತೇನೆ. 2019 ರಲ್ಲಿ ಸದರಿ ಸಹಿಯನ್ನು ಮೊಗರಹಳ್ಳಿ ಮಂಟಿಯ ಸರ್ವೆ ನಂ.50 ಜಮೀನಿನಲ್ಲಿ ಹಾಕಿರುತ್ತೇನೆ.

2) ನಾನು ಸದರಿ ಸರ್ವೇ ನಂಬರಿನಲ್ಲಿ ಎರಡು ಕಾಲು ಗುಂಟೆ ಜಮೀನು ಖರೀದಿಸಿದ್ದೆ. ಸದರಿ ಜಮೀನಿಗೆ ಕಲ್ಲು ನೆಟ್ಟಿಸಿ ನಾಮಫಲಕ ಹಾಕಿದ್ದೆವು. ನಾವ ಫಲಕ ನೆಟ್ಟಿಸಿದ್ದ ಮರುದಿನ ಅದನ್ನುಹೊಡೆದು ಹಾಕಿದ್ದರು. ಈ ಸಂಬಂದ ಪ್ರಕರಣ ದಾಖಲಾಗಿತ್ತು ಅದಕ್ಕೆ ಸಂಬಂದಪಟ್ಟಂತೆ ಸ್ಥಳ ಮಹಜರಿಗೆ ಪೋಲೀಸರು ಅಲ್ಲಿಗೆ ಬಂದಿದ್ದರು. ಸ್ಥಳದಲ್ಲಿ ಕಲ್ಲುಗಳನ್ನೆಲ್ಲಾ ಕಿತ್ತು ಹಾಕಿದ್ದು ನಾಮಫಲಕ ಹೊಡೆದು ಹಾಕಿದ್ದರು. ಪೋಲೀಸರು ಮಹಜರ್ ಮಾಡಿ ಒಂದು ಸೀಮೆಂಟ್ ಚೂರನ್ನು ವಶಪಡಿಸಿಕೊಂಡರು. ಅದನ್ನು

ನೋಡಿದರೆ ಗುರುತಿಸಬಲ್ಲೆ. ಸದರಿ ಸೀಮೆಂಟ್ ಚೂರನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೆ ಎಂಒ–1 ಎಂದು ಗುರುತಿಸಲಾಗಿದೆ. ಮಹಜರ್ ಸಂಜೆ 4.30 ರಿಂದ 5.00 ಗಂಟೆ ಸಮಯದಲ್ಲಿ ಮಾಡಿರುತ್ತಾರೆ.

**ಪಾಟೀಸವಾಲುಃ ಆರೋಪಿತರ ಪರ ಶ್ರೀಮತಿ ಹೆಚ್.ಎಸ್.ಆರ್ ವಕೀಲರಿಂದಃ**

**ಆರೋಪಿತರ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದು ಸಕಾರಣ ಇಲ್ಲದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಗಿದೆ**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿದೆ

**(ಮಂಜುಳಾ ಇಟ್ಟಿ)**

5ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ

ನ್ಯಾಯಾಲಯ, ಮಂಡ್ಯ

**ನ್ಯಾಯಾಲಯದ ಆದೇಶದ ಮೇರೆಗೆ ಸಾಕ್ಷಿದಾರರನ್ನು ಪುನಃ ಕರೆಯಿಸಿ ದಿನಾಂಕಃ 24.03.2026 ರಂದು ಪ್ರಮಾಣವಚನ ಬೋಧಿಸಲಾಯಿತು**

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ.ಎಸ್.ಪಿ ವಕೀಲರಿಂದ:**

**1.** ನಾನು ಕೆ.ಎಸ್.ಆರ್.ಟಿ.ಸಿ ಚಾಲಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೆ. ನಾನು ಮಂಡ್ಯದ ವಿ.ವಿ.ನಗರದಲ್ಲಿ ವಾಸವಿದ್ದೇನೆ. ಸರ್ವೇ ನಂಬರ್ 50 ರಲ್ಲಿ ಎರಡು ಕಾಲು ಗುಂಟೆ ಜಮೀನನ್ನು 1ನೇ ಆರೋಪಿ ರಾಜಮ್ಮರವರಿಂದ 1994 ರಲ್ಲಿ ಖರೀದಿಸಿರುತ್ತೇನೆ. ನಮ್ಮ ಕುಟುಂಬದಲ್ಲಿ ನನ್ನ ತಮ್ಮ ರಾಮಚಂದ್ರಾಚಾರಿ ಪೋಲೀಸ್ ಇಲಾಖೆಯಲ್ಲಿ ಕೆಲಸ ಮಾಡಿರುತ್ತಾರೆ. ನನ್ನ ತಮ್ಮ ರಾಮಚಂದ್ರಾಚಾರಿ ಸರ್ವೇ ನಂಬರ್ 50 ರಲ್ಲಿ ಯಾವುದೇ ಜಮೀನನ್ನು ಖರೀದಿಸಿರುವುದಿಲ್ಲ. ನಿಪಿ–6 ಮಹಜರಿನಲ್ಲಿರುವ ಜಮೀನಿನ ಚಕ್ಕುಬಂದಿ ನನಗೆ ಹೇಳಲು ಬರುವುದಿಲ್ಲ. ಸರ್ವೆ ನಂಬರ್ 50 ರಲ್ಲಿ ಒಟ್ಟು 2 ಎಕರೆ 30 ಗುಂಟೆ

ಜಮೀನು 1ನೇ ಆರೋಪಿಯ ಹೆಸರಿನಲ್ಲಿ ಇದೆ. ನಿಪಿ-6 ಮಹಜರಿನಲ್ಲಿರುವ ಜಮೀನಿನ ಮಾಲೀಕರು 1ನೇ ಆರೋಪಿ ರಾಜಮ್ಮ. ನಿಪಿ-6 ಮಹಜರಿನಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿದೆ. ಯಾವ ಸರ್ವೆ ನಂಬರಿನ ಎಷ್ಟು ಗುಂಟೆ ಜಮೀನಿಗೆ ಸಂಬಂದಪಟ್ಟಂತೆ ಮಹಜರಿನಲ್ಲಿ ನಮೂದು ಇದೆ ಎಂದು ನನಗೆ ಹೇಳಲು ಬರುವುದಿಲ್ಲ. ನಾನು ಖರೀದಿಸಿರುತ್ತೇನೆ ಎನ್ನುವ ಎರಡು ಕಾಲು ಗುಂಟೆ ಜಮೀನಿಗೆ ಸಂಬಂದಪಟ್ಟಂತೆ ಕಂದಾಯ ದಾಖಲೆ ಯಾವ ವರ್ಷ ಮಾಡಿಸಿರುತ್ತೇನೆ ಎಂದು ನನಗೆ ಗೊತ್ತಿಲ್ಲ. ಸರ್ವೆ ಇಲಾಖೆಯಿಂದ ಪೋಡಿ ದುರಸ್ತಿ ಮಾಡಿಸಿರುತ್ತೇನೆ. ಈ ಬಗ್ಗೆ ದಾಖಲೆಯನ್ನು ಪೋಲೀಸರಿಗೆ ನೀಡಿರುತ್ತೇನೆ. ಸರ್ವೆ ನಂಬ್ 50 ರಲ್ಲಿ ನಾನು ಯಾವುದೇ ಜಮೀನು ಖರೀದಿಸಿರುವುದೂ ಇಲ್ಲ ಅದಕ್ಕೆ ಸಂಬಂಪಟ್ಟ ಕಂದಾಯ ದಾಖಲೆಗಳು ಇರುವುದಿಲ್ಲ, ಪೋಡಿ ದುರಸ್ತಿ ಮಾಡಿಸಿವುದು ಇಲ್ಲ ಎಂದರೆ ಸರಿಯಲ್ಲ.

**2.** ಸದರಿ ಜಮೀನಿನಲ್ಲಿ ತಡೆಗೋಡೆಯಾಗಲೀ, ಬೇಲಿಯಾಗಲೀ ಇರುವುದಿಲ್ಲ. ರಾಜಮ್ಮರವರಿಗೆ ಎಷ್ಟು ಗುಂಟೆ ಜಮೀನು ಸರ್ವೆ ನಂ.50 ರಲ್ಲಿ ಇತ್ತು ಎಂದು ನನಗೆ ಹೇಳಲು ಬರುವುದಿಲ್ಲ. ನಿಪಿ-6 ಮಹಜರಿನಲ್ಲಿರುವ ಜಮೀನಿನ ಬಗ್ಗೆ ನನಗೆ ಗೊತ್ತಿದೆ. ಸದರಿ ಜಮೀನಿನ ಕಲ್ಲುಗಳನ್ನು ನಿವೃತ್ತ ಪೋಲೀಸರು ಎಲ್ಲರೂ ಸೇರಿ ನೆಡಿಸಿದ್ದರು. ಇದಕ್ಕೆ ಸಂಬಂದಪಟ್ಟಂತೆ ಅವರು ಅನುಮತಿಯನ್ನು ತಹಶೀಲ್ದಾರ್, ಸರ್ವೆಯರ್ ರವರಿಂದ ಪಡೆದುಕೊಂಡಿದ್ದರು. ಸದರಿ ಅನುವತಿಯ ದಾಖಲೆಗಳನ್ನು ತನಿಖಾ ವೇಳೆಯಲ್ಲಿ ಅವರು ಹಾಜರುಪಡಿಸಿರುತ್ತಾರೆ. ಯಾವುದೇ ಅನುಮತಿಯನ್ನು ಪಡೆದುಕೊಂಡಿರುವುದಿಲ್ಲ, ನಾನು, ಶಿವಲಿಂಗಯ್ಯ, ಡಿ.ವಿ.ನಾಗರಾಜು, ಕೆ.ವಿ.ಜವರಶೆಟ್ಟಿ, ಚಿಕ್ಕಪುಟ್ಟಯ್ಯ, ಕೆ.ದೊಡ್ಡನರಸಿಂಹೇಗೌಡ, ಮಂಚಯ್ಯ, ದೇವರಾಜು, ಎಂ.ಮಲ್ಲೇಗೌಡ, ಸಿ.ಸಚ್ಚಿದಾನಂದ, ನಾಗಲಿಂಗಪ್ಪರವರು ಸೇರಿ ರಸ್ತೆ ಮತ್ತು ಚರಂಡಿಯನ್ನು ಸದರಿ ಜಮೀನಿನಲ್ಲಿ ಅಕ್ರಮವಾಗಿ ಮಾಡಿರುತ್ತೇವೆ ಎಂದರೆ ಸರಿಯಲ್ಲ.

**3.** ಸರ್ವೆ ನಂಬರ್ 50 ರ ಜಮೀನಿನಲ್ಲಿ 32 ಗುಂಟೆ ಜಮೀನನ್ನು 2017 ರಲಿ ಆರೋಪಿತರ ಹೆಣ್ಣುಮಕ್ಕಳಿಗೆ ವಿಭಾಗದ ಮೂಲಕ ಕೊಟ್ಟಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸದರಿ ಸ್ವತ್ತನ್ನು ಅವರು ಕಂದಾಯ ದಾಖಲೆ ಮಾಡಿಸಿ ಪೋಡಿ ದುರಸ್ತಿ ಮಾಡಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

**4.** ನಾನು, ಕೆ.ಬಿ.ಜವರಶೆಟ್ಟಿ, ಚಿಕ್ಕಪುಟ್ಟಯ್ಯ, ಕೆ.ದೊಡ್ಡನರಸಿಂಹೇಗೌಡ, ದೇವರಾಜು, ಸಿ.ಸಚ್ಚಿದಾನಂದ, ಎಂ.ಮಲ್ಲೇಗೌಡ, ನಾಗಲಿಂಗಪ್ಪ ಮತ್ತು ಡಿ.ವಿ.ನಾಗರಾಜುರವರು ಅನದೀಕೃತವಾಗಿ ರಸ್ತೆ ಮತ್ತು ಚರಂಡಿ ನಿರ್ಮಾಣ ಮಾಡಿರುತ್ತೇವೆ ಎಂದು ಆರೋಪಿತರ ಹೆಣ್ಣು ಮಕ್ಕಳು ನನ್ನ ಮತ್ತು ಈ ಮೇಲೆ ಹೇಳಿದವರ ವಿರುದ್ಧ ಶ್ರೀರಂಗಪಟ್ಟಣ ಸಿವಿಲ್ ನ್ಯಾಯಾಲಯದಲ್ಲಿ ಒ.ಎಸ್.35/2019 ದಾವೆಯನ್ನು ಹೂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಸಿವಿಲ್ ದಾವೆಯಲ್ಲಿ ತಾತ್ಕಾಲಿಕ ನಿರ್ಭಂದಕಾಜ್ಞೆಯನ್ನು ಪಡೆದುಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ನಿರ್ಭಂದಕಾಜ್ಞೆಯ ನೋಟೀಸು ನಮಗೆಲ್ಲರಿಗೂ ಬಂದಿರುತ್ತದೆ ಎಂದರೆ ಸರಿಯಲ್ಲ. ದಿಃ25.01.2019 ರಂದು ಆರೋಪಿತರ ಹೆಣ್ಣುಮಕ್ಕಳಾದ ಶೀಲಾ, ಶಿಲ್ಪಾ, ಶೈಲಾ ಮತ್ತು ಶೋಭಾರವರುಗಳು ಶ್ರೀರಂಗಪಟ್ಟಣ ತಹಶೀಲ್ದಾರ್ ರವರ ಮುಂದೆ ನಮ್ಮ ವಿರುದ್ಧ ದೂರು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ನಂತರ ಸುಳ್ಳು ದೂರನ್ನು ದಾಖಲಿಸಲಾಗಿರುತ್ತದೆ ಎಂದರೆ ಸರಿಯಲ್ಲ.

**5.** ಮಂಡ್ಯದಿಂದ ಮೊಗರಹಳ್ಳಿ ಮಂಟಿ ಸಮಾರು 35 ಕಿಮಿ ದೂರು ಇದೆ. ನಿಪಿ–6 ಮಹಜರಿಗೆ ಬರಲು ಪೋಲೀಸರು ನನಗೆ ನೋಟೀಸನ್ನು ನೀಡಿರುವುದಾಗಿ ನನಗೆ ನೆನಪಿಲ್ಲ. ದಿಃ02.02.2019 ರಂದು ಅಲ್ಲಿಗೆ ಹೋಗಿರುತ್ತೇನೆ. ಆ ಸಮಯ ನನ್ನ ಜೊತೆ ಪೋಲೀಸರು ನಾಗಲಿಂಗಯ್ಯ, ಬೇರೆ 3 – 4 ಜನರು ಇದ್ದರು. ನಾಗಲಿಂಗಯ್ಯ ನಿಪಿ–6 ಮಹಜರಿಗೆ ಸಹಿ ಮಾಡಿರುತ್ತಾರೆ. ಬೇರೆ ಯಾರು ಸಹಿ ಮಾಡಿರುತ್ತಾರೆ ಎಂದು ನೆನಪಿಲ್ಲ. ನಿಪಿ–6 ಮಹಜರಿಗೆ ಕೆ.ಆರ್.ಎಸ್ ಪೋಲೀಸ್ ಠಾಣೆಯಲ್ಲಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ–6 ಮಹಜರಿನಲ್ಲಿ ಏನು ಬರೆದಿದೆ ಎಂದು ಪೋಲೀಸರು ಓದಿ ಹೇಳಿರುತ್ತಾರೆ ಆದರೆ ಈಗ ನನಗೆ ನೆನಪಿಲ್ಲ. ನನ್ನ ಸಮಕ್ಷಮ ಪೋಲೀಸರು ಯಾವುದೇ ವಸ್ತು ವಶಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಕಟ್ಟಡ ಕಟ್ಟುವ ಎಲ್ಲಾ ಸ್ಥಳಗಳಲ್ಲಿಯೂ ಸೀಮೆಂಟ್ ಚೂರುಗಳು ಸಿಗುತ್ತವೆ ಎಂದರೆ ಸರಿ. ನನ್ನ ಸಮಕ್ಷಮ ವಶಪಡಿಸಿಕೊಂಡಿರುತ್ತಾರೆ ಎನ್ನುವ ಸೀಮೆಂಟ್ ಚೂರುಗಳಲ್ಲಿ ನನ್ನ ಸಹಿ ಪಡೆದುಕೊಂಡಿರುತ್ತಾರೆ. ಸದರಿ ವಸ್ತುಗಳಲ್ಲಿನನ್ನ ಸಹಿ ಇರುವುದಿಲ್ಲ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**6.** ಆರೋಪಿತರ ಹೆಣ್ಣು ಮಕ್ಕಳು ನಮ್ಮ ವಿರುದ್ಧ ನಿರ್ಭಂದಕಾಜ್ಞೆಯನ್ನು ಪಡೆದುಕೊಂಡಿರುವ ದ್ವೇಷದಿಂದ ಪೋಲೀಸರ ಜೊತೆ ಶಾಮೀಲಾಗಿ ನಾನು ಹಾಗೂ ಪೋಲೀಸ್ ಸಿಬ್ಬಂದಿಗಳು ಪ್ರಭಾವ ಬೀರಿ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾಮಪಲಕವನ್ನುಹೊಡೆದುಹಾಕಿರುತ್ತಾರೆ ಎನ್ನುವ ಮರುದಿನವೇ ನಾನು ಸ್ಥಳಕ್ಕೆ ಹೋಗಿರುತ್ತೇನೆ ಅದೇ ದಿನ ದೂರನ್ನು ಸಲ್ಲಿಸಿರುತ್ತೇನೆ. ಅದೇ ದಿನ ಮಹಜರನ್ನು ಮಾಡಿರುತ್ತಾರೆ. ಈ ಬಗ್ಗೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**7.** ನಿಪಿ–8 ಒಂದೆನೇ ಪೋಟೋದಲ್ಲಿ ನಾಮಪಲಕ ನೆಟ್ಟಿರುವ ಹಾಗೂ ಹೊಡೆದುಹಾಕಿರುವ ಬಗ್ಗೆ ಯಾವುದೇ ಕುರುಹುಗಳು ಇರುವುದಿಲ್ಲ ಎಂದರೆ ಸರಿ. ಎರಡನೇ ಪೋಟೋದಲ್ಲಿ ಎರಡು ಕಲ್ಲುಗಳನ್ನು ಇಟ್ಟು ಪೋಟೋ ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ನಿಪಿ–8 ಪೋಟೋಗಳನ್ನು ಪೋಟೋಗ್ರಾಫರ್ ತೆಗೆದಿರುತ್ತಾರೆ. ನಿಪಿ–8 ಪೋಟೋಗಳನ್ನು ನಾನು ಮತ್ತು ಪೋಲೀಸರು ಸೇರಿ ಸೃಷ್ಟಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

**8.**ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ನನಗೆ ಇರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತರ ವಿರುದ್ಧ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ ಎಂದು ನುಡಿಯುತ್ತಾರೆ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿದೆ

**(ಮಂಜುಳಾ ಇಟ್ಟಿ)**
**ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು –**
**1ನೇ ತ್ವರಿತಗತಿ ವಿಶೇಷ ನ್ಯಾಯಾಲಯ,**
**ಮಂಡ್ಯ**